# ಬೀಡಿ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1976

(1976ರ ಅಧಿನಿಯಮ ಸಂಖ್ಯೆ 56)

**[23.02.2004ರ ಭಾರತ ರಾಜಪತ್ರದ IXನೇ ಭಾಗದ, 1ನೇ ವಿಭಾಗದ, 28ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 2 ರಿಂದ 3ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**

1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ತಯಾರಿಸಿದ ಬೀಡಿ ಮೇಲೆ ಉಪಕರ ವಿಧಿಸುವುದು ಮತ್ತು ವಸೂಲು ಮಾಡುವುದು

3ಎ. ಉಪಕರಗಳಿಗೆ 1944ರ ಅಧಿನಿಯಮ 1ರ ಅನ್ವಯ

4. ಭಾರತ ಸಂಚಿತ ನಿಧಿಗೆ ಸುಂಕದ ಉತ್ಪನ್ನವನ್ನು ಜಮಾ ಮಾಡುವುದು
5. ಮಾಹಿತಿ ಕೋರುವ ಅಧಿಕಾರ
6. ಸದ್ಭಾವನೆಯಿಂದ ಮಾಡಿದ ಕಾರ್ಯದ ಸಂರಕ್ಷಣೆ
7. ನಿಯಮ ರಚನಾಧಿಕಾರ

# ಬೀಡಿ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ, 1976

(1976ರ ಅಧಿನಿಯಮ ಸಂಖ್ಯೆ 56)

[7ನೇ ಏಪ್ರಿಲ್, 1976]

ತಯಾರಿಸಿದ ಬೀಡಿಗಳ ಮೇಲೆ ಉಪಕರದ ರೂಪದಲ್ಲಿ ಉತ್ಪಾದನಾ ಸುಂಕವನ್ನು ವಿಧಿಸಿ ವಸೂಲಿ ಮಾಡುವುದಕ್ಕಾಗಿ ಉಪಬಂಧಿಸುವ ಅಧಿನಿಯಮ.

ಭಾರತ ಗಣರಾಜ್ಯದ ಇಪ್ಪತ್ತೇಳನೆಯ ವರ್ಷದಲ್ಲಿ ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.**- (1) ಈ ಅಧಿನಿಯಮವನ್ನು ಬೀಡಿ ಕೆಲಸಗಾರರ ಕಲ್ಯಾಣ ಉಪಕರ ಅಧಿನಿಯಮ 1976 ಎಂದು ಕರೆಯತಕ್ಕದ್ದು.

(2) ಇದು ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

(3) ಇದು ರಾಜಪತ್ರದಲ್ಲಿ, ಅಧಿಸೂಚನೆಯ ಮೂಲಕ ಕೇಂದ್ರ ಸರ್ಕಾರವು ಗೊತ್ತುಪಡಿಸಬಹುದಾದಂಥ * ದಿನಾಂಕದಂದು ಜಾರಿಗೆ ಬರತಕ್ಕದ್ದು.

* 15-2-97ರಂದು ಜಾರಿಗೆ ಬಂದಿದೆ.

**2. ಪರಿಭಾಷೆಗಳು.**- ಈ ಅಧಿನಿಯಮದಲ್ಲಿ ಸಂದರ್ಭಕ್ಕೆ ಬೇರೆ ಅರ್ಥದ ಅಗತ್ಯವಿರದಿದ್ದರೆ,-

(ಎ) "ನಿಧಿ" ಎಂದರೆ, ಬೀಡಿ ಕೆಲಸಗಾರರ ಕಲ್ಯಾಣ ನಿಧಿ ಅಧಿನಿಯಮ, 1976ರ 3ನೇ ಪ್ರಕರಣದ ಮೇರೆಗೆ ರಚಿಸಿದ ಬೀಡಿ ಕೆಲಸಗಾರರ ಕಲ್ಯಾಣ ನಿಧಿ ಎಂದು ಅರ್ಥ.

(ಬಿ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಿದುದು ಎಂದರ್ಥ.

(ಸಿ) ಈ ಅಧಿನಿಯಮದಲ್ಲಿ ಬಳಸಿರುವ ಆದರೆ ಪರಿಭಾಷಿಸಿರದ ಪದಗಳಿಗೆ ಮತ್ತು ಪದಾವಳಿಗೆ ಕೇಂದ್ರ ಉತ್ಪಾದನಾ ಸುಂಕ ಮತ್ತು ಉಪ್ಪು ಅಧಿನಿಯಮ, 1944 (1944 ರ 1)ರಲ್ಲಿ ಪರಿಭಾಷಿಸಿ, ಆ ಅಧಿನಿಯಮದಲ್ಲಿ ಅನುಕ್ರಮವಾಗಿ ಕೊಡಲಾಗಿರುವ ಅರ್ಥಗಳೇ ಇರತಕ್ಕದ್ದು.

**3. ತಯಾರಿಸಿದ ಬೀಡಿ ಮೇಲೆ ಉಪಕರ ವಿಧಿಸುವುದು ಮತ್ತು ವಸೂಲು ಮಾಡುವುದು.**- (1) ತಯಾರಿಸಿದ ಬೀಡಿಗಳ ಮೇಲೆ ಬೀಡಿ ಕೆಲಸಗಾರರ ಕಲ್ಯಾಣ ನಿಧಿ ಅಧಿನಿಯಮ 1976ರ ಉದ್ದೇಶಗಳಿಗಾಗಿ, ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಆಗಿಂದಾಗ್ಗೆ ನಿಗದಿಪಡಿಸಬಹುದಾದಂತೆ, ತಯಾರಿಸಲಾದ ಪ್ರತಿ ಸಾವಿರ ಬೀಡಿಗಳಿಗೆ ಹತ್ತು ಪೈಸೆಗಿಂತ ಕಡಿಮೆಯಿಲ್ಲದ ಅಥವಾ ಐವತ್ತು ಪೈಸೆಗಿಂತ ಹೆಚ್ಚಲ್ಲದ ದರದಲ್ಲಿ ಉತ್ಪಾದನಾ ಸುಂಕವನ್ನು ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಉಪಕರ ರೂಪದಲ್ಲಿ ವಿಧಿಸತಕ್ಕದ್ದು, ಮತ್ತು ವಸೂಲು ಮಾಡತಕ್ಕದ್ದು.

(2) (1)ನೇ ಉಪ ಪ್ರಕರಣದ ಮೇರೆಗೆ ವಿಧಿಸಿದ ಉತ್ಪಾದನಾ ಸುಂಕವು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನು ಮೇರೆಗೆ ತಯಾರಿಸಲಾದ ಬೀಡಿಗಳ (ಹಾಗೆಂದು ಬಿಡಿಸಿ ಹೇಳಿರಲಿ ಅಥವಾ ಬೀಡಿಗಳು ಎಂದಾಗಲಿ ಅಥವಾ ಯಾವುದೇ ರೀತಿಯಲ್ಲಿ ಹೇಳಿರಲಿ) ಮೇಲೆ ವಿಧಿಸಬಹುದಾದ ಯಾವುದೇ ಉಪಕರ ಅಥವಾ ಸುಂಕದ ಜತೆಗೆ ಇರತಕ್ಕದ್ದು.

**3ಎ. ಉಪಕರಗಳಿಗೆ 1944ರ ಅಧಿನಿಯಮ 1ರ ಅನ್ವಯ.**- ಕಾಲಕಾಲಕ್ಕೆ ಜಾರಿಯಲ್ಲಿರುವ ಕೇಂದ್ರ ಉತ್ಪಾದನಾ ಸುಂಕ ಮತ್ತು ಉಪ್ಪು ಅಧಿನಿಯಮ, 1944ರ ಉಪಬಂಧಗಳು ಅಥವಾ ಅವುಗಳ ಮೇರೆಗಿನ ನಿಯಮಗಳು, ಮರುಪಾವತಿಗಳಿಗೆ ಮತ್ತು ಸುಂಕದಿಂದ ವಿನಾಯಿತಿಗೆ ಸಂಬಂಧಪಟ್ಟವುಗಳೂ ಸೇರಿದಂತೆ ಸಾಧ್ಯವಿರಬಹುದಾದಷ್ಟು ಮಟ್ಟಿಗೆ ಆ ಅಧಿನಿಯಮದ ಮೇರೆಗೆ ತಯಾರಿಸಲಾದ ಬೀಡಿಗಳ ಸಂಬಂಧದಲ್ಲಿ ಉತ್ಪಾದನಾ ಸುಂಕ ವಿಧಿಸುವ, ವಸೂಲು ಮಾಡುವ ಮತ್ತು ಮರುಪಾವತಿ ಮಾಡುವ ಅಥವಾ ಅದರಿಂದ ವಿನಾಯಿತಿ ನೀಡುವ ಸಂಬಂಧದಲ್ಲಿ ಅವು ಅನ್ವಯವಾಗುವ ರೀತಿಯಲ್ಲಿಯೇ ಈ

ಅಧಿನಿಯಮದ ಮೇರೆಗೆ ಉಪಕರ ವಿಧಿಸುವ, ವಸೂಲು ಮಾಡುವ ಮತ್ತು ಮರುಪಾವತಿ ಮಾಡುವ ಅಥವಾ ಅದರಿಂದ ವಿನಾಯಿತಿ ಪಡೆಯುವ, ಸಂಬಂಧದಲ್ಲಿಯೂ ಅನ್ವಯವಾಗತಕ್ಕದ್ದು.

4. **ಭಾರತ ಸಂಚಿತ ನಿಧಿಗೆ ಸುಂಕದ ಉತ್ಪನ್ನವನ್ನು ಜಮಾ ಮಾಡುವುದು.**- 3ನೇ ಪ್ರಕರಣದ (1)ನೇ ಉಪ-ಪ್ರಕರಣದ ಮೇರೆಗೆ ವಿಧಿಸಲಾದ ಉತ್ಪಾದನಾ ಸುಂಕದ ಉತ್ಪನ್ನವನ್ನು ಭಾರತ ಸಂಚಿತ ನಿಧಿಗೆ ಜಮೆ ಮಾಡತಕ್ಕದ್ದು.

5. **ಮಾಹಿತಿ ಕೋರುವ ಅಧಿಕಾರ.**- ಕೇಂದ್ರ ಸರ್ಕಾರವು ಅಥವಾ ಅದು ನಿರ್ದಿಷ್ಟಪಡಿಸಿದ ಇತರ ಯಾವುದೇ ಪ್ರಾಧಿಕಾರವು, ಈ ಸಂಬಂಧದಲ್ಲಿ ಈ ಅಧಿನಿಯಮದ ಉದ್ದೇಶಗಳಿಗಾಗಿ, ತನಗೆ ಸೂಕ್ತವೆಂದು ಭಾವಿಸುವಂತಹ ಅಂಕಿ ಅಂಶಗಳು ಮತ್ತು ಇತರ ಯಾವುದೇ ಮಾಹಿತಿಯನ್ನು ಒದಗಿಸುವಂತೆ ಯಾರೇ ವ್ಯಕ್ತಿಯನ್ನು ಅಗತ್ಯಪಡಿಸಬಹುದು.

6. **ಸದ್ಭಾವನೆಯಿಂದ ಮಾಡಿದ ಕಾರ್ಯದ ಸಂರಕ್ಷಣೆ.**- ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ನಿಯಮಗಳ ಮೇರೆಗೆ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಲು ಉದ್ದೇಶಿಸಿದ ಯಾವುದೇ ಕಾರ್ಯದ ಬಗ್ಗೆ ಕೇಂದ್ರ ಸರ್ಕಾರದ ಅಥವಾ ಕೇಂದ್ರ ಸರ್ಕಾರದ ಯಾರೇ ಅಧಿಕಾರಿ ಅಥವಾ ಇತರ ನೌಕರನ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯನ್ನು ಹೂಡಲು ಅವಕಾಶವಿರತಕ್ಕದ್ದಲ್ಲ.

7. **ನಿಯಮ ರಚನಾಧಿಕಾರ.**- (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಉಪಬಂಧಗಳನ್ನು ಜಾರಿಗೊಳಿಸಲು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ನಿಯಮಗಳನ್ನು ರಚಿಸಬಹುದು.

(2) ವಿಶೇಷತಃ ಮತ್ತು ಹಿಂದೆ ಹೇಳಿದ ಅಧಿಕಾರದ ಸಾಮಾನ್ಯಾನ್ವಯಕ್ಕೆ ಬಾಧಕವಾಗದಂತೆ, ಅಂತಹ ನಿಯಮಗಳು,-

(ಎ) [1981ರ 47ನೇ ಸಂಖ್ಯೆಯ ಅಧಿನಿಯಮದ 6ನೇ ಪ್ರಕರಣದ ಮೂಲಕ ಬಿಟ್ಟುಬಿಡಲಾಗಿದೆ.]

(ಬಿ) ಕೇಂದ್ರ ಸರ್ಕಾರಕ್ಕೆ ಅಥವಾ ಈ ಸಂಬಂಧದಲ್ಲಿ ಅದು ನಿರ್ದಿಷ್ಟಪಡಿಸಬಹುದಾದ ಯಾವುದೇ ಇತರ ಪ್ರಾಧಿಕಾರಕ್ಕೆ ಯಾರೇ ವ್ಯಕ್ತಿಯು 5ನೇ ಪ್ರಕರಣದ ಮೇರೆಗೆ ಒದಗಿಸಲು ಅಗತ್ಯವಿರಬಹುದಾದಂತಹ ಅಂಕಿಅಂಶಗಳು ಮತ್ತು ಯಾವುದೇ ಇತರ ಮಾಹಿತಿಗಳನ್ನು ಒದಗಿಸುವುದು;

(ಸಿ) ಈ ಅಧಿನಿಯಮದ ಮೇರೆಗೆ ರಚಿಸಲಾದ ನಿಯಮಗಳ ಮೂಲಕ ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಅಥವಾ ಉಪಬಂಧ ಕಲ್ಪಿಸಬಹುದಾದ ಯಾವುದೇ ಇತರ ವಿಷಯ

- ಇವುಗಳ ಬಗ್ಗೆ ಉಪಬಂಧ ಕಲ್ಪಿಸಬಹುದು.

3) ಈ ಪ್ರಕರಣದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ, ಸಾಧ್ಯವಾದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶದಲ್ಲಿ ಅಥವಾ ಒಂದಾದ ಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಮೇಲೆ ಹೇಳಿದ ಅಧಿವೇಶನವು ಅಥವಾ ಒಂದಾದ ಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನವು ಮುಕ್ತಾಯವಾಗುವುದಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಲು ಎರಡು ಸದನಗಳು ಒಪ್ಪಿದರೆ, ಅಥವಾ ಆ ನಿಯಮವನ್ನು ರಚಿಸಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂಧರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಅಂತಹ ಯಾವುದೇ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಆ ಹಿಂದೆ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

* * *